## ಕರ್ನಾಟಕ ಸರ್ಕಾರ

31 AUG 2021

**ವಿಷಯ:** ದಿನಾಂಕ: 01.04.2006 ರಂದು ಮತ್ತು ತದನಂತರ ಸರ್ಕಾರಿ ಸೇವೆಗೆ ನೇಮಕ ಹೊಂದಿರುವ ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಪಿಂಚಣಿ ಕೊಡುಗೆ ಯೋಜನೆಗೆ ಒಳಪಡುವ ಸರ್ಕಾರಿ ನೌಕರರಿಗೆ ನಿವೃತ್ತಿ ಮತ್ತು ಮರಣ ಉಪದಾನ ಹಾಗೂ ಕುಟುಂಬ ಪಿಂಚಣಿ ಸೌಲಭ್ಯವನ್ನು ವಿಸ್ತರಿಸುವ ಬಗ್ಗೆ.

**ಓದಲಾಗಿದೆ:**

(1) ಸರ್ಕಾರದ ಆದೇಶದ ಸಂಖ್ಯೆ: ಆಇ 34 ಪಿಇಎನ್ 2018, ದಿನಾಂಕ: 23.06.2018.
(2) ಖಜಾನೆ ಆಯುಕ್ತರ ಪತ್ರ ಸಂಖ್ಯೆ: DOT/NPS0EXIT(DETH)/2/2020, ದಿನಾಂಕ: 20.01.2021.

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ದಿನಾಂಕ: 01.04.2006 ರಂದು ಮತ್ತು ತದನಂತರ ಸರ್ಕಾರಿ ಸೇವೆಗೆ ಸೇರಿದ ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಪಿಂಚಣಿ ಕೊಡುಗೆ ಯೋಜನೆಯಡಿ ಬರುವ ಸರ್ಕಾರಿ ನೌಕರರಿಗೆ ನಿವೃತ್ತಿ ಉಪದಾನ, ಮರಣ ಉಪದಾನ ಹಾಗೂ ಕುಟುಂಬ ಪಿಂಚಣಿ ಸೌಲಭ್ಯವನ್ನು ದಿನಾಂಕ: 01.04.2018ರಿಂದ ಜಾರಿಗೆ ಬರುವಂತೆ ವಿಸ್ತರಿಸಿ ಆದೇಶಿಸಲಾಗಿದೆ.

ಸದರಿ ಆದೇಶದ ಕಂಡಿಕೆ (3) ರಲ್ಲಿ ನಮೂದಿಸಿರುವಂತೆ ದಿನಾಂಕ: 01.04.2018 ರಂದು ಅಥವಾ ತದನಂತರ ಸೇವೆಯಲ್ಲಿರುವಾಗಲೇ ಮರಣ ಹೊಂದಿದ ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಪಿಂಚಣಿ ಕೊಡುಗೆ ಯೋಜನೆಯ ವ್ಯಾಪ್ತಿಗೆ ಬರುವ ಸರ್ಕಾರಿ ನೌಕರರ ಅವಲಂಬಿತರು ಆಯ್ಕೆ ಮಾಡಿಕೊಂಡಲ್ಲಿ, ಮೃತ ನೌಕರರ ಪಿಂಚಣಿ ನಿಧಿಯಲ್ಲಿ ಕ್ರೋಢೀಕೃತವಾದ ಮೊತ್ತವನ್ನು ಸರ್ಕಾರವು ಹಿಂಪಡೆಯುವ ಷರತ್ತಿಗೊಳಪಟ್ಟು ಕರ್ನಾಟಕ ಸರ್ಕಾರಿ ನೌಕರರ (ಕುಟುಂಬ ಪಿಂಚಣಿ) ನಿಯಮಗಳು 2002 ರನ್ವಯ ಕುಟುಂಬ ಪಿಂಚಣಿ ಸೌಲಭ್ಯವನ್ನು ವಿಸ್ತರಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಖಜಾನೆ ಆಯುಕ್ತರ ಪತ್ರದಲ್ಲಿ ಸರ್ಕಾರದ ಆದೇಶದ ಸಂಖ್ಯೆ: ಆಇ 34 ಪಿಇಎನ್ 2018, ದಿನಾಂಕ: 23.06.2018ಕ್ಕೆ ಸಂಬಂಧಿಸಿದಂತೆ ಕೆಲವೊಂದು ಮಾರ್ಗಸೂಚಿಗಳನ್ನು ಹೊರಡಿಸುವ ಸಲುವಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

### ಸರ್ಕಾರದ ಆದೇಶದ ಸಂಖ್ಯೆ: ಆಇ 34 ಪಿಇಎನ್ 2018(ಭಾ), ಬೆಂಗಳೂರು, ದಿನಾಂಕ: 19.08.2021

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶದ ಸಂಖ್ಯೆ: ಆಇ 34 ಪಿಇಎನ್ 2018, ದಿನಾಂಕ: 23.06.2018ರಲ್ಲಿ ದಿನಾಂಕ: 01.04.2006 ರಂದು ಮತ್ತು ತದನಂತರ ಸರ್ಕಾರಿ ಸೇವೆಗೆ ಸೇರಿದ ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಪಿಂಚಣಿ

ಕೊಡುಗೆ ಯೋಜನೆಯಡಿ ಬರುವ ಸರ್ಕಾರಿ ನೌಕರರಿಗೆ ನಿವೃತ್ತಿ ಉಪದಾನ, ಮರಣ ಉಪದಾನ ಹಾಗೂ ಕುಟುಂಬ ಪಿಂಚಣಿ ಸೌಲಭ್ಯವನ್ನು ದಿನಾಂಕ: 01.04.2018ರಿಂದ ಜಾರಿಗೆ ಬರುವಂತೆ ವಿಸ್ತರಿಸಿ ಆದೇಶಿಸಲಾಗಿದೆ. ಸದರಿ ಆದೇಶಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಮಾರ್ಗಸೂಚಿಗಳನ್ನು ಹೊರಡಿಸಿ ಆದೇಶಿಸಲಾಗಿದೆ.

**ಸರ್ಕಾರದ ಆದೇಶದ ಸಂಖ್ಯೆ: ಆಇ 34 ಪಿಇಎನ್ 2018, ದಿನಾಂಕ: 23.06.2018ರ ಆದೇಶದ ಅನ್ವಯ ಕುಟುಂಬ ಪಿಂಚಣಿ ಪಾವತಿಯ ಅನುಷ್ಠಾನಕ್ಕಾಗಿ ಕುರಿತಂತೆ ಈ ಕೆಳಕಂಡ ಹಂತಗಳಲ್ಲಿ ಕ್ರಮ ವಹಿಸಬೇಕಿರುತ್ತದೆ:-**

1) ಕುಟುಂಬ ಪಿಂಚಣಿ ಮಂಜೂರಾತಿಗಾಗಿ ಸಂಬಂಧಿಸಿದ ಡಿಡಿಓರವರು ವೇತನ ಪಡೆಯುವ ಖಜಾನೆಗೆ ನಿಯಮಾನುಸಾರ ಪ್ರಸ್ತಾವನೆ ಸಲ್ಲಿಸುವುದು.
2) ಖಜಾನೆಗಳು ಡಿಡಿಓರವರಿಂದ ಸ್ವೀಕೃತಗೊಂಡಿರುವ ಪ್ರಸ್ತಾವನೆ ಮೇರೆಗೆ ಪ್ರಾನ್ ಖಾತೆಯಲ್ಲಿನ ಮೊತ್ತವನ್ನು ಹಿಂಪಡೆಯುವ ಸಂಬಂಧ ಕುಟುಂಬ ಪಿಂಚಣಿಗಾಗಿ ಸಿ.ಆರ್.ಎ. ರವರಲ್ಲಿ Online ಮೂಲಕ claim ID initiate and authorize ಮಾಡಿರುವ ವಿವರಗಳೊಂದಿಗೆ ಪ್ರಸ್ತಾವನೆಯನ್ನು ಎನ್.ಪಿ.ಎಸ್. ಘಟಕಕ್ಕೆ ಸಲ್ಲಿಸುವುದು.
3) ಸಿ.ಆರ್.ಎ. ರವರು ಪ್ರಾನ್ ಖಾತೆಯನ್ನು freeze ಮಾಡಿ ಪ್ರಾನ್ ಖಾತೆಯಲ್ಲಿರುವ ಸಂಪೂರ್ಣ ಮೊತ್ತವನ್ನು ಆಯುಕ್ತರ ಪದನಾಮದಲ್ಲಿ ತೆರೆದಿರುವ ಬ್ಯಾಂಕ್ ಖಾತೆಗೆ ಜಮೆ ಮಾಡುವುದು ಹಾಗೂ ಜಮೆ ಮೊತ್ತದ ವಿವರವನ್ನು ಇ-ಮೇಲ್ ಮೂಲಕ ಎನ್.ಪಿ.ಎಸ್. ಘಟಕಕ್ಕೆ, ಖಜಾನೆಗಳಿಗೆ/ಡಿಡಿಓಗೆ ಖಚಿತಪಡಿಸುವುದು.
4) ಸಿ.ಆರ್.ಎ. ಯಿಂದ ಬ್ಯಾಂಕ್ ಖಾತೆಗೆ ಜಮೆಯಾಗಿರುವ ಮೊತ್ತವನ್ನು ಎನ್.ಪಿ.ಎಸ್. ಘಟಕವು ಸರ್ಕಾರದ ಲೆಕ್ಕಶೀರ್ಷಿಕೆಗೆ ಜಮೆ ಮಾಡಿ ಡಿಡಿಓಗೆ ಮೂಲ ಚಲನ್ ಅನ್ನು ಕಳುಹಿಸುವುದು ಹಾಗೂ ಸಂಬಂಧಿಸಿದ ಖಜಾನೆಗೆ ಜೆರಾಕ್ಸ್ ಚಲನ್ ಪ್ರತಿಯನ್ನು ಮಾಹಿತಿಗಾಗಿ ಕಳುಹಿಸುವುದು.
5) ಕುಟುಂಬ ಪಿಂಚಣಿ ಮಂಜೂರಾತಿಗಾಗಿ ಸೇವಾ ಪುಸ್ತಕದೊಂದಿಗೆ ಡಿಡಿಓರವರು ಸರ್ಕಾರಕ್ಕೆ ಪಾವತಿಸಿದ ಮೂಲ ಚಲನ್‌ನೊಂದಿಗೆ ಪ್ರಸ್ತಾವನೆಯನ್ನು ಮಹಾಲೇಖಪಾಲರಿಗೆ ಸಲ್ಲಿಸುವುದು.
6) ಮಹಾಲೇಖಪಾಲರು ಪಾವತಿ ವಿವರಗಳನ್ನು ಖಚಿತ ಪಡಿಸಿಕೊಂಡು ಕುಟುಂಬ ಪಿಂಚಣಿ ಹಾಗೂ ಡಿ.ಸಿ.ಆರ್.ಜಿ. ಯನ್ನು ಮಂಜೂರು ಮಾಡಿ ಪ್ರತಿಗಳನ್ನು ಡಿಡಿಓ/ಖಜಾನೆಗೆ ಕಳುಹಿಸುವುದು.
7) ಮಹಾಲೇಖಪಾಲರಿಂದ ಮಂಜೂರಾದ ಕುಟುಂಬ ಪಿಂಚಣಿ ಹಾಗೂ ಡಿ.ಸಿ.ಆರ್.ಜಿ. ಯನ್ನು ಪಾವತಿಸಲು ನಿಯಮಾನುಸಾರ ಡಿಡಿಓ/ಖಜಾನೆಗಳು ಕ್ರಮವಹಿಸುವುದು.

**1. ಕುಟುಂಬ ಪಿಂಚಣಿ ಮಂಜೂರಾತಿಗಾಗಿ ಡಿಡಿಓರವರು ಸಂಬಂಧಪಟ್ಟ ಖಜಾನೆಗೆ ಪ್ರಸ್ತಾವನೆ ಸಲ್ಲಿಸುವುದು:-**

ದಿನಾಂಕ: 01.04.2018 ರಂದು ಮತ್ತು ತದನಂತರ ಸೇವೆಯಲ್ಲಿರುವಾಗಲೇ ಮೃತರಾದ ನೌಕರರ ನಾಮನಿರ್ದೇಶಿತರ ಲಿಖಿತ ಆಯ್ಕೆ ಮೇರೆಗೆ ಕುಟುಂಬ ಪಿಂಚಣಿ ಪಾವತಿಗಾಗಿ ಸಂಬಂಧಪಟ್ಟ ಡಿಡಿಓರವರು ಮೃತ ನೌಕರರ ಪ್ರಾನ್ ಖಾತೆಯಲ್ಲಿರುವ ಸಂಪೂರ್ಣ ಮೊತ್ತವನ್ನು ಸರ್ಕಾರಕ್ಕೆ ಹಿಂಪಡೆಯಲು ಒಪ್ಪಿ, ಸಂಬಂಧಿಸಿದ ಖಜಾನೆಗೆ ಈ ಕೆಳಕಂಡ ದಾಖಲೆಗಳನ್ನು ತ್ರಿಪ್ರತಿಯಲ್ಲಿ ಸಲ್ಲಿಸುವುದು.

a) Annexure-3 ನಮೂನೆಯಲ್ಲಿ ಡಿಡಿಓರವರು ಕುಟುಂಬ ಪಿಂಚಣಿಗಾಗಿ ಪ್ರಸ್ತಾವನೆ ಸಲ್ಲಿಸುವುದು.

b) ಸಂಬಂಧಿಸಿದವರಿಂದ ಕುಟುಂಬ ಪಿಂಚಣಿ ಪಡೆಯಲು ಒಪ್ಪಿಗೆ ಪತ್ರ(Annexure-2)
c) ಮರಣ ಪ್ರಮಾಣ ಪತ್ರ (ದ್ವಿಪ್ರತಿ)
d) ಜೀವಂತ ಪ್ರಮಾಣ ಪತ್ರ (ದ್ವಿಪ್ರತಿ)
e) ಡಿಡಿಓ ರವರಿಂದ ದೃಢೀಕರಿಸಿರುವ ಪ್ರಾನ್ ಕಾರ್ಡ್ ಜೆರಾಕ್ಸ್ (ದ್ವಿಪ್ರತಿ)
f) ಇತ್ತೀಚಿನ ಎನ್.ಪಿ.ಎಸ್. ಬ್ಯಾಲೆನ್ಸ್ ಶೀಟ್, (SOT latest)
g) ಪ್ರಸ್ತಾವನೆ ಸಲ್ಲಿಸುವ ದಿನಾಂಕಕ್ಕೆ ಮೃತ ಸರ್ಕಾರಿ ನೌಕರರ ಪ್ರಾನ್ ಖಾತೆಗೆ ಯಾವುದೇ ಮೊತ್ತ ಜಮೆ ಮಾಡುವುದು ಬಾಕಿ ಇರುವುದಿಲ್ಲವೆಂದು ಡಿಡಿಓರವರಿಂದ ದೃಢೀಕರಣ.

**2. ಖಜಾನೆಯವರು ಡಿಡಿಓರವರಿಂದ ಸ್ವೀಕೃತಗೊಂಡ ಕುಟುಂಬ ಪಿಂಚಣಿ ಪಾವತಿ ಪ್ರಸ್ತಾವನೆ ಮೇರೆಗೆ ಪ್ರಾನ್ ಖಾತೆಯ ಮೊತ್ತ ಹಿಂಪಡೆಯುವ ಸಂಬಂಧ ಕ್ರಮವಹಿಸುವುದು:-**

a) ಡಿಡಿಓರವರಿಂದ ಕುಟುಂಬ ಪಿಂಚಣಿಗಾಗಿ ಪ್ರಸ್ತಾವನೆಯನ್ನು ಖಜಾನೆಯಲ್ಲಿ ಸ್ವೀಕರಿಸಿದ ನಂತರ, ಖಜಾನೆಯವರು ಪ್ರಸ್ತಾವನೆಯನ್ನು ಪರಿಶೀಲಿಸಿ, ಪ್ರಾನ್ ಖಾತೆಯಲ್ಲಿರುವ ಸಂಪೂರ್ಣ ಮೊತ್ತವನ್ನು ಸರ್ಕಾರಕ್ಕೆ ಹಿಂಪಡೆಯಲು NSDL-CRA ರವರಲ್ಲಿ Claim ID ಅನ್ನು Annexure-1 ನಮೂನೆಯಲ್ಲಿ ತುಂಬಿಸಿ, Claim ID ಜನರೇಟ್ ಮಾಡಿ authorize ಮಾಡಬೇಕಿರುತ್ತದೆ.

b) ಡಿಡಿಓರವರಿಂದ ಪಡೆದ ಮೃತ ನೌಕರರಿಗೆ ಸಂಬಂಧಪಟ್ಟ ದಾಖಲೆಗಳ hardcopyಗಳ ಜೊತೆಗೆ ಖಜಾನಾಧಿಕಾರಿಯು Annexure-1 ನಮೂನೆಯನ್ನು ಸಹಿ ಮಾಡಿ NSDL-CRA ಮುಂಬೈ ಇವರಿಗೆ ಒಂದು ಪ್ರತಿಯನ್ನು ಹಾಗೂ ಎನ್.ಪಿ.ಎಸ್. ಘಟಕ, ಬೆಂಗಳೂರು ಇಲ್ಲಿಗೆ ಒಂದು ಪ್ರತಿಯನ್ನು ನೋಂದಣಿ ಅಂಚೆ ಮೂಲಕ ಕಳುಹಿಸಬೇಕಿರುತ್ತದೆ.

**3. NSDL-CRA ರವರು ಪ್ರಾನ್ ಖಾತೆಯಲ್ಲಿರುವ ಸಂಪೂರ್ಣ ಮೊತ್ತವನ್ನು ಆಯುಕ್ತರ ಬ್ಯಾಂಕ್ ಖಾತೆಗೆ ಜಮೆ ಮಾಡುವುದು:-**

(a) ಖಜಾನಾಧಿಕಾರಿಗಳು (ನೋಡಲ್ ಅಧಿಕಾರಿ) ಸಿ.ಆರ್.ಎ. ರವರಲ್ಲಿ authorize ಮಾಡಿದ claim ID ಯ ಆಧಾರದ ಮೇಲೆ ನೌಕರನ ಪ್ರಾನ್ ಖಾತೆಯಲ್ಲಿರುವ ಸಂಪೂರ್ಣ ಮೊತ್ತವನ್ನು (ನೌಕರರ ವಂತಿಗೆ ಹಾಗೂ ಅದರ ಮೇಲಿನ ಆದಾಯ, ಸರ್ಕಾರದ ವಂತಿಗೆ ಹಾಗೂ ಅದರ ಮೇಲಿನ ಆದಾಯ) ಖಜಾನೆ ಆಯುಕ್ತರ ಪದನಾಮದಲ್ಲಿ ತೆರೆದಿರುವ ಬ್ಯಾಂಕ್ ಖಾತೆಗೆ ಸಿ.ಆರ್.ಎ. ರವರು ಜಮೆ ಮಾಡುವುದು ಹಾಗೂ ಜಮೆಯ ವಿವರಗಳನ್ನು ಇ-ಮೇಲ್ ಮೂಲಕ ಎನ್.ಪಿ.ಎಸ್. ಘಟಕಕ್ಕೆ ತಿಳಿಸುವುದು. ಪ್ರಾನ್ ಖಾತೆಯಲ್ಲಿ ಕ್ರೋಢಿಕೃತವಾಗಿರುವ ಮೊತ್ತದ ವಿವರ ಹಾಗೂ ನೌಕರರು ಒಂದು ವೇಳೆ ಭಾಗಶಃ ಮೊತ್ತವನ್ನು ಪ್ರಾನ್ ಖಾತೆಯಿಂದ ಹಿಂಪಡೆದಿದ್ದರೆ, ಸದರಿ ಮೊತ್ತದ ವಿವರವನ್ನು ಸಹ ಸಿ.ಆರ್.ಎ. ರವರು ಪತ್ರ/ಇ-ಮೇಲ್ ಮೂಲಕ ಎನ್.ಪಿ.ಎಸ್. ಘಟಕಕ್ಕೆ ಹಾಗೂ ಸಂಬಂಧಪಟ್ಟ ಡಿಡಿಓ/ಖಜಾನಾಧಿಕಾರಿಗಳಿಗೆ ಮಾಹಿತಿ ನೀಡುವುದು.

(b) ಒಂದು ವೇಳೆ ಸಿ.ಆರ್.ಎ. ರವರು ಪ್ರಾನ್ ಖಾತೆಯಲ್ಲಿರುವ ಮೊತ್ತದ ವಿವರ ನೀಡಿರುವ ತ:ಖ್ತೆಯಲ್ಲಿ ಮೃತ ನೌಕರರು ಭಾಗಶ: ಮೊತ್ತವನ್ನು

ಹಿಂಪಡೆದಿದ್ದರೆ, ಸದರಿ ಮೊತ್ತವನ್ನು ಮರಣ ಉಪದಾನದಿಂದ ಕಡಿತಗೊಳಿಸಲು ಡಿಡಿಓ ರವರು ಮಹಾಲೇಖಪಾಲರಿಗೆ ಪ್ರಸ್ತಾವನೆ ಸಲ್ಲಿಸುವುದು. ಅದನ್ನು ಖಚಿತಪಡಿಸಿಕೊಳ್ಳುವುದು ಡಿಡಿಓ ರವರ ಜವಾಬ್ದಾರಿಯಾಗಿರುತ್ತದೆ.

**4. ಎನ್.ಪಿ.ಎಸ್. ಘಟಕದಿಂದ ಬ್ಯಾಂಕ್ ಖಾತೆಗೆ ಜಮೆಯಾಗಿರುವ ಮೊತ್ತವನ್ನು ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡುವ ಬಗ್ಗೆ:-**

ಪ್ರಾನ್ ಖಾತೆಯಲ್ಲಿರುವ ಸಂಪೂರ್ಣ ಮೊತ್ತವನ್ನು ಖಜಾನೆ ಆಯುಕ್ತರ ಪದನಾಮದಲ್ಲಿ ತೆರೆದಿರುವ ಬ್ಯಾಂಕ್ ಖಾತೆಗೆ ಜಮೆಯಾದ ವಿವರವು ಸಿ.ಆರ್.ಎ. ರವರ ಇ-ಮೇಲ್ ಮೂಲಕ ಖಚಿತಗೊಂಡ ನಂತರ, ಎನ್.ಪಿ.ಎಸ್. ಘಟಕದಿಂದ ಸದರಿ ಮೊತ್ತವನ್ನು ಸರ್ಕಾರದ ಲೆಕ್ಕ ಶೀರ್ಷಿಕೆ 0071-01-800-4-01-251 ಗೆ ಖಜಾನೆ-2 ಚಲನ್ ಮೂಲಕ ಜಮೆ ಮಾಡುವುದು. ತದನಂತರ ಒಂದು ಮೂಲ ಚಲನ್ ಪ್ರತಿಯೊಂದಿಗೆ, ಸಿ.ಆರ್.ಎ. ರವರ ಇ-ಮೇಲ್ ಪ್ರತಿಯನ್ನು ಡಿಡಿಓ ಗೆ ನೀಡುವುದು. ಜೆರಾಕ್ಸ್ ಚಲನ್ ಪ್ರತಿಗಳನ್ನು ಸಂಬಂಧಪಟ್ಟ ಖಜಾನೆಗೆ ಕಳುಹಿಸುವುದು ಹಾಗೂ ಇನ್ನೊಂದು ಜೆರಾಕ್ಸ್ ಚಲನ್ ಪ್ರತಿಯನ್ನು ಎನ್.ಪಿ.ಎಸ್. ಘಟಕದಲ್ಲಿ ದಾಖಲೆಗಾಗಿ ಸಂರಕ್ಷಿಸುವುದು.

**5. ಡಿಡಿಓರವರು ಮಹಾಲೇಖಪಾಲರಿಗೆ ಕುಟುಂಬ ಪಿಂಚಣಿ ಹಾಗೂ ಮರಣ ಉಪದಾನವನ್ನು ಮಂಜೂರು ಮಾಡಲು ಪ್ರಸ್ತಾವನೆ ಸಲ್ಲಿಸುವುದು (ಹಳೆ ಪಿಂಚಣಿ ನಿಯಮದನುಸಾರ)**

ಮೃತ ನೌಕರರ ಪ್ರಾನ್ ಖಾತೆಯಲ್ಲಿರುವ ಮೊತ್ತವನ್ನು ಸರ್ಕಾರಕ್ಕೆ ಜಮೆ ಮಾಡಿರುವ ಮೂಲ ಚಲನ್ ಪ್ರತಿ, ಸಿ.ಆರ್.ಎ. ಇ-ಮೇಲ್ ಪ್ರತಿಯನ್ನು ಡಿಡಿಓ ಕಛೇರಿಯಲ್ಲಿ ಸ್ವೀಕರಿಸಿದ ನಂತರ ಡಿಡಿಓರವರು ಹೆಚ್.ಆರ್.ಎಂ.ಎಸ್. ನಿಂದ ಕುಟುಂಬ ಪಿಂಚಣಿ Annexure-5 download ಮಾಡಿಕೊಂಡು, ಸಂಬಂಧಪಟ್ಟ ದಾಖಲೆ (ಮೂಲ ಚಲನ್, ಸೇವಾ ಪುಸ್ತಕ ಹಾಗೂ ಇನ್ನಿತರ ಅಗತ್ಯ ದಾಖಲೆಗಳು) ಗಳೊಂದಿಗೆ ಕುಟುಂಬ ಪಿಂಚಣಿ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ನಿಯಮಾನುಸಾರ ಮಹಾಲೇಖಪಾಲರಿಗೆ ಸಲ್ಲಿಸುವುದು.

**6. ಮಹಾಲೇಖಪಾಲರು ಕುಟುಂಬ ಪಿಂಚಣಿ ಹಾಗೂ ಡಿಸಿಆರ್‌ಜಿ ಯನ್ನು ಮಂಜೂರು ಮಾಡಿ ಪ್ರತಿಗಳನ್ನು ಡಿಡಿಓ/ಖಜಾನೆಗೆ ಪಾವತಿಗಾಗಿ ಕಳುಹಿಸುವುದು:-**

ದಿನಾಂಕ: 01.04.2018 ರಂದು ಮತ್ತು ತದನಂತರ ಸೇವೆಯಲ್ಲಿರುವಾಗಲೇ ಮೃತರಾದ ನೌಕರರ ನಾಮನಿರ್ದೇಶಿತರ ಆಯ್ಕೆ ಮೇರೆಗೆ ಪ್ರಾನ್ ಖಾತೆಯಲ್ಲಿ ಕ್ರೋಢಿಕೃತವಾಗಿರುವ ಮೊತ್ತವನ್ನು ಸರ್ಕಾರಕ್ಕೆ ಹಿಂಪಡೆದ ನಂತರ ಡಿಡಿಓರವರು ಸದರಿ ಚಲನ್ ಪ್ರತಿ ಹಾಗೂ ಇನ್ನಿತರ ಅಗತ್ಯ ದಾಖಲೆಯೊಂದಿಗೆ ಕುಟುಂಬ ಪಿಂಚಣಿ ಹಾಗೂ ಡಿ.ಸಿ.ಆರ್.ಜಿ.ಗಾಗಿ ಪ್ರಸ್ತಾವನೆಯನ್ನು ಮಹಾಲೇಖಪಾಲರಿಗೆ ಸಲ್ಲಿಸುವುದು. ಮಹಾಲೇಖಪಾಲರು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಡಿ.ಸಿ.ಆರ್.ಜಿ ಹಾಗೂ ಕುಟುಂಬ ಪಿಂಚಣಿ ಮಂಜೂರಾಗಿರುವ ಪ್ರಾಧಿಕಾರ ಪತ್ರವನ್ನು ಸಂಬಂಧಪಟ್ಟ ಡಿಡಿಓಗೆ/ಖಜಾನೆಗೆ/ನೌಕರರಿಗೆ ಪಾವತಿಗಾಗಿ ಕಳುಹಿಸುವುದು.

**7. ಮಹಾಲೇಖಪಾಲರಿಂದ ಮಂಜೂರಾದ ಕುಟುಂಬ ಪಿಂಚಣಿ ಹಾಗೂ ಡಿ.ಸಿ.ಆರ್.ಜಿ. ಪಾವತಿಸಲು ಡಿಡಿಓಗಳು ಕ್ರಮಕೈಗೊಳ್ಳುವುದು.**

ಮಹಾಲೇಖಪಾಲರು ಮೃತ ಎನ್.ಪಿ.ಎಸ್. ಅಧಿಕಾರಿ/ನೌಕರರ ಕುಟುಂಬ ಪಿಂಚಣಿ ಪ್ರಾಧೀಕರಿಸಿದ ಆಧಾರದ ಮೇಲೆ ಮೃತ ಎನ್.ಪಿ.ಎಸ್. ನೌಕರನ ನಾಮ ನಿರ್ದೇಶಿತರಿಗೆ ಕುಟುಂಬ ಪಿಂಚಣಿ ಪಾವತಿಸಲು ಡಿಡಿಓಗಳು ನಿಯಮಾನುಸಾರ ಕ್ರಮಕೈಗೊಳ್ಳುವುದು.

**ಮರಣ ಉಪದಾನ**

ದಿನಾಂಕ: 23.06.2018ರ ಸರ್ಕಾರದ ಆದೇಶದಲ್ಲಿ ಎನ್.ಪಿ.ಎಸ್. ಯೋಜನೆಗೆ ಒಳಪಟ್ಟು ಸೇವೆಯಲ್ಲಿರುವಾಗಲೇ ಮರಣ ಹೊಂದುವ ಸರ್ಕಾರಿ ನೌಕರರ ಅವಲಂಬಿತ ಕುಟುಂಬಕ್ಕೆ ದಿನಾಂಕ: 01.04.2018 ರಿಂದ ಜಾರಿಗೆ ಬರುವಂತೆ ಹಳೆಯ ಪಿಂಚಣಿ ಯೋಜನೆಯ ನಿಯಮಾನುಸಾರ ಅನ್ವಯಿಸಿ ಮರಣ ಉಪದಾನ ಸೌಲಭ್ಯವನ್ನು ವಿಸ್ತರಿಸಿ ಆದೇಶಿಸಲಾಗಿದೆ. ಆದುದರಿಂದ ಡಿಡಿಓ ರವರು ಮರಣ ಉಪದಾನದ ಸಂಬಂಧ ಹಳೆ ಪಿಂಚಣಿ ಯೋಜನೆಯಡಿ ಮರಣ ಉಪದಾನಕ್ಕೆ ಮಹಾಲೇಖಪಾಲರಿಗೆ ಪ್ರಸ್ತಾವನೆ ಸಲ್ಲಿಸುವ ರೀತಿಯಲ್ಲಿಯೇ ಎನ್.ಪಿ.ಎಸ್. ನೌಕರರಿಗೂ ಸಹ ಪ್ರಸ್ತಾವನೆಯನ್ನು ಮಹಾಲೇಖಪಾಲರಿಗೆ ಸಲ್ಲಿಸುವುದು.

ಒಂದು ವೇಳೆ ಮೃತ ಎನ್.ಪಿ.ಎಸ್. ನೌಕರರು ಪ್ರಾನ್ ಖಾತೆಯಿಂದ ಭಾಗಶಃ ಮೊತ್ತವನ್ನು ಹಿಂಪಡೆದಿದ್ದರೆ, ಸದರಿ ಮೊತ್ತದ ವಿವರವನ್ನು ಸಿ.ಆರ್.ಎ. ಯಿಂದ ಎನ್.ಪಿ.ಎಸ್. ಘಟಕದ ಮೂಲಕ ಪಡೆದು ಸದರಿ ಮೊತ್ತವನ್ನು ಮರಣ ಉಪದಾನದಲ್ಲಿ ಕಡಿತಗೊಳಿಸಿ ಮರಣ ಉಪದಾನ ಪಾವತಿಗಾಗಿ ಪ್ರಸ್ತಾವನೆಯನ್ನು ಮಹಾಲೇಖಪಾಲರಿಗೆ ಸಲ್ಲಿಸುವುದು ಡಿಡಿಓಗಳ ಜವಾಬ್ದಾರಿಯಾಗಿರುತ್ತದೆ.

**ನಿವೃತ್ತಿ ಉಪದಾನ**

ದಿನಾಂಕ: 23.06.2018 ರ ಸರ್ಕಾರದ ಆದೇಶದಲ್ಲಿ ದಿನಾಂಕ: 01.04.2018 ರಂದು ಮತ್ತು ತದನಂತರ ಸೇವೆಯಿಂದ ನಿವೃತ್ತಿ ಹೊಂದುವ ಎನ್.ಪಿ.ಎಸ್. ನೌಕರರಿಗೆ ನಿವೃತ್ತಿ ಉಪದಾನವನ್ನು ಹಳೆ ಪಿಂಚಣಿ ಯೋಜನೆಯ ವ್ಯಾಪ್ತಿಗೆ ಬರುವ ಸರ್ಕಾರಿ ನೌಕರರಿಗೆ ವಿಸ್ತರಿಸಿರುವಂತೆ ಎನ್.ಪಿ.ಎಸ್. ನೌಕರರಿಗೂ ಸಹ ವಿಸ್ತರಿಸಿ ಸೌಲಭ್ಯ ಒದಗಿಸಲಾಗಿದೆ. ಆದುದರಿಂದ ಡಿಡಿಓ ರವರು ನಿವೃತ್ತಿ ಉಪದಾನದ ಸಂಬಂಧ ಹಳೆ ಪಿಂಚಣಿ ಯೋಜನೆಯಡಿ ನಿವೃತ್ತಿ ಉಪದಾನಕ್ಕೆ ಮಹಾಲೇಖಪಾಲರಿಗೆ ಪ್ರಸ್ತಾವನೆ ಸಲ್ಲಿಸುವ ರೀತಿಯಲ್ಲಿಯೇ ಎನ್.ಪಿ.ಎಸ್. ನೌಕರರಿಗೂ ಸಹ ಪ್ರಸ್ತಾವನೆಯನ್ನು ಮಹಾಲೇಖಪಾಲರಿಗೆ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶನುಸಾರ
ಮತ್ತು ಅವರ ಹೆಸರಿನಲ್ಲಿ.

(ಕುಮಟಾ ಪ್ರಕಾಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಿಶ್ರಾಂತಿ ವೇತನ ಮತ್ತು
ಆರ್ಥಿಕ ಆಯೋಗ ಕೋಶ).
19/08/2021

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸುವುದಕ್ಕಾಗಿ ಹಾಗೂ 50 ಪ್ರತಿಗಳನ್ನು ಆರ್ಥಿಕ ಇಲಾಖೆಗೆ ಸರಬರಾಜು ಮಾಡಲು ಕೋರಿದೆ.

ಪ್ರತಿಗಳು:

1. ಮಹಾಲೇಖಪಾಲರು (ಲೆಕ್ಕಪತ್ರ / ಲೆಕ್ಕಪರಿಶೋಧನೆ) ಜಿ.ಎಂ. ಶಾಖೆ, ಬೆಂಗಳೂರು.

2. ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ.
5. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
6. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
7. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
8. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
9. ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
10. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
11. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ ಕರ್ನಾಟಕ ವಿಧಾನ ಪರಿಷತ್ತು, ಬೆಂಗಳೂರು.
12. ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು.
13. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
14. ಆಯುಕ್ತರು, ಖಜಾನೆ ಆಯುಕ್ತಾಲಯ, , 5 ಮತ್ತು 6ನೇ ಮಹಡಿ, ಕೆ.ಪಿ.ಸಿ.ಎಲ್. ಕಟ್ಟಡ, ಅರಮನೆ ರಸ್ತೆ, ಬೆಂಗಳೂರು.
15. ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು ಮತ್ತು ಎಲ್ಲಾ ಜಿಲ್ಲಾ ಖಜಾನೆಗಳು.
16. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ.
17. ಅಧ್ಯಕ್ಷರು, ಕರ್ನಾಟಕ ರಾಜ್ಯ ಎನ್.ಪಿ.ಎಸ್. ನೌಕರರ ಸಂಘ, ಬೆಂಗಳೂರು.
18. ಕರ್ನಾಟಕ ಸರ್ಕಾರ ಸಚಿವಾಲಯದ ಗ್ರಂಥಾಲಯ, ವಿಧಾನ ಸೌಧ, ಬೆಂಗಳೂರು.
19. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಂತರ್ಜಾಲತಾಣ:

www.finance.karnataka.gov.in ವೀಕ್ಷಿಸಿ

## Annexure-1

**(To be sent by Treasury to CRA)**

**Declaration by Nodal office**

{To be declared by the nodal office where family pension is granted to the family member(s) of deceased subscriber or to the subscriber}

It is certified that the family pension is being paid by this office to the following family members of the late subscriber Sri./Smt/Ms__________________ bearing PRAN ____________of the deceased employee.

Name of the deceased employee:____________________________________

Name of the family member: ________________________________________

Relationship of family member with the subscriber: ____________________

In this respect, a No abjection Certificate to transfer the accumulated pension wealth from the NPS account of the deceased subscriber to this office/Govt are submitted by the above family member(s) of the deceased subscriber/Subscriber Same is enclosed along with this declaration.

Therefore, now, in accordance with Regulation 6(e) of PFRDA (Exits and Withdrawals) Regulations, 2015 the amount of accumulated pension wealth lying in the PRAN:_______ of the deceased subscriber Sri./Smt/Ms.______________________ may be released to this nodal office bank account as per the details given as under.

| | | | |
|---|---|---|---|
| Name of the Beneficiary | | DTA Reg. No. | |
| Bank Account Number | | DTO/PAO Reg.No. | |
| Bank Name | | | |
| Branch Name | | | |
| IFS Code | | | |

- This office have been collected NOC from the family members of the deceased subscriber to transfer the accumulated pension wealth from the NPS account of the deceased subscriber duly attested by the concerned DDO.

- I hereby declare that details furnished above are true and correct as per office records. PFRDA/NPS Trust/CRA shall not be responsible in case of any wrong information furnished in this regard. Further, I understand that funds

will be transferred to PAO bank account on authorisation of withdrawal request by officer and physical documents is required to be forwarded to CRA for record keeping within 60 days of authorization of withdrawal request.

- I hereby declare that copy of Death Certificate of the Subscriber and copy of PRAN Card/ePRAN of the Subscriber have been collected from the family member(s) of the deceased Subscriber/Subscriber and duly attested by concerned DDO Office.

Signed by DTO/PAO.

| Signature of DTO/PAO:<br><br>Office Seal : | | |
|---|---|---|
| Date | Name of the DTO/PAO | |
| Palce: | PAO Regn No. | |

Annexure-2

(To be submitted by Nominee to DDO)

No objection for settlement of Accumulated Corpus Wealth in NPS PRAN Account.

(To be enclosed along with Treasury nodal office declaration in Annexure-1 where family pension is obtained from nominee of the deceased employee).

I__________________ (name of the claimant) here by confirm that I have no objection to surrender the entire accumulated corpus in the PRAN Account____________ of deceased Employee____________ to thc Government in order to get family pension as per family Pension rules 2002.

Details of the Claimant /Nominee

1) Name of the Nominee:
2) Relationship with deceased employee:
3) Address:
4) Phone No./Mobile No./e-mail ID:
5) Place
6) Date

I hereby declare that above details furnished by me are true and correct as per my knowledge.

Signature of the Claimant

Attestation by Concerned DDO:

It is certified that the above declaration and details have been entered and signed/thumb impressed by the family member(s) of deceased subscriber Sri./Smt/Ms.____________________________________________PRAN___ __________Further the above details have been verified from the service record of the deceased subscriber found in order further.

- I hereby declare that No Objection Certificate to transfer the accumulated pension wealth from the NPS account of the deceased subscriber to this office have been collected from the family member(s) of the deceased subscriber.

- I hereby declare that details furnished above are true and correct as per our office records, PFRDA/NPS/Trust/CRA shall not be responsible in case of any wrong information furnished in this regard. Further, I understand that funds will be transferred to PAO bank account on authorisation of withdrawal request by office and physical documents in required to be forwarded to CRA for record keeping within 60 days of authorization of withdrawal request.

- I hereby declare that copy of Death Certificate of the Subscriber and copy of PRAN Card/e-PRAN of the Subscriber have been collected from the family member(s) of the deceased Subscriber and duly attested by this office.

Signed by DDO

| Signature of DDO:<br><br>Office Seal : | | |
|---|---|---|
| Date: | Name of the DDO: | |
| Place: | DDO Regn No. | |

**ಕರ್ನಾಟಕ ಸರ್ಕಾರ**
**ಖಜಾನೆ ಇಲಾಖೆ**
**ಅನುಬಂಧ-3**

**ಡಿಡಿಓ ರವರು ಎನ್.ಪಿ.ಎಸ್ ನೌಕರರ ಕುಟುಂಬ ಪಿಂಚಣಿಗಾಗಿ ಸಂಬಂಧಪಟ್ಟ ಖಜಾನೆಗೆ ಪ್ರಸ್ತಾವನೆ ಸಲ್ಲಿಸುವ ನಮೂನೆ.**

ಇವರಿಗೆ,
--------------------
--------------------
--------------------
--------------------

ಮಾನ್ಯರೇ,

ವಿಷಯ: ದಿವಂಗತ ಶ್ರೀ/ಶ್ರೀಮತಿ.............................. ಪ್ರಾನ್ ಸಂಖ್ಯೆ......................................... ಪದನಾಮ..........................ರವರ ನಾಮ ನಿರ್ದೇಶಿತರ ಆಯ್ಕೆ ಮೇರೆಗೆ ಪ್ರಾನ್ ಖಾತೆಯಲ್ಲಿರುವ ಮೊತ್ತವನ್ನು ಹಿಂಪಡೆಯಲು ಪ್ರಸ್ತಾವನೆ ಸಲ್ಲಿಸುವ ಬಗ್ಗೆ.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿವಂಗತ......................ಪ್ರಾನ್ ಸಂಖ್ಯೆ................................ನೌಕರರು /ಅಧಿಕಾರಿಗಳು ದಿನಾಂಕ: .........................ದಂದು ಮರಣ ಹೊಂದಿದ ಕಾರಣ, ಮೃತರ ನಾಮನಿರ್ದೇಶಿತರಾದ ಅವರ ಪತ್ನಿ/ಪತಿ/ಮಗ/ಮಗಳು ಶ್ರೀ/ಶ್ರೀಮತಿ............................... ದಿನಾಂಕ: 23.06.2018 ರ ಸರ್ಕಾರದ ಆದೇಶದ ಅನ್ವಯ ಪ್ರಾನ್ ಖಾತೆಯಲ್ಲಿ ಕ್ರೋಢಿಕೃತವಾದ ಮೊತ್ತವನ್ನು ಸರ್ಕಾರಕ್ಕೆ ಹಿಂಪಡೆಯಲು ಒಪ್ಪಿ ಕುಟುಂಬ ಪಿಂಚಣಿಯನ್ನು ಆಯ್ಕೆ ಮಾಡಿರುವ ಮೇರೆಗೆ ಪ್ರಾನ್ ಖಾತೆಯಲ್ಲಿರುವ ಮೊತ್ತವನ್ನು ಹಿಂಪಡೆಯಲು ಈ ಕೆಳಕಂಡ ದಾಖಲೆಗಳೊಂದಿಗೆ ಖಜಾನೆಗೆ ಪ್ರಸ್ತಾವನೆ ಸಲ್ಲಿಸಿದೆ.

h) ಸಂಬಂಧಿಸಿದವರಿಂದ ಕುಟುಂಬ ಪಿಂಚಣಿ ಪಡೆಯಲು ಒಪ್ಪಿಗೆ ಪತ್ರ (Annexure-2)
i) ಮರಣ ಪ್ರಮಾಣ ಪತ್ರ (ದ್ವಿಪ್ರತಿ)
j) ಉತ್ತರ ಜೀವಿತ ಪ್ರಮಾಣ ಪತ್ರ (ದ್ವಿಪ್ರತಿ)
k) ಪ್ರಾನ್ ಕಾರ್ಡ್ ಜೆರಾಕ್ಸ್ (ದ್ವಿಪ್ರತಿ) (Attested by DDO)
l) ಇತ್ತೀಚಿನ ಎನ್.ಪಿ.ಎಸ್ ಬ್ಯಾಲೆನ್ಸ್ ಶೀಟ್ (SOT latest)
m) ಮೃತ ಸರ್ಕಾರಿ ನೌಕರರ ಪ್ರಾನ್ ಸಂಖ್ಯೆಗೆ ಯಾವುದೇ ಮೊತ್ತ ಜಮೆ ಮಾಡುವುದು ಬಾಕಿಯಿರುವುದಿಲ್ಲವೆಂದು ಡಿಡಿಓ ರವರಿಂದ ದೃಢೀಕರಣ.

ತಮ್ಮ ನಂಬುಗೆಯ,

--------------- ಖಜಾನೆ

**ಕರ್ನಾಟಕ ಸರ್ಕಾರ**
**ಖಜಾನೆ ಇಲಾಖೆ**
**ಅನುಬಂಧ-4**

## ಖಜಾನಾಧಿಕಾರಿಗಳು ಪ್ರಾನ್ ಖಾತೆಯಲ್ಲಿ ಕ್ರೋಢಿಕೃತವಾಗಿರುವ ಮೊತ್ತವನ್ನು ಸರ್ಕಾರಕ್ಕೆ ಜಮೆ ಮಾಡಿದ ನಂತರ ಸದರಿ ಮಾಹಿತಿಯನ್ನು ಡಿಡಿಓರವರಿಗೆ ನೀಡುವ ನಮೂನೆ.

ಇವರಿಗೆ,

--------------------

--------------------

--------------------

--------------------

ಮಾನ್ಯರೇ,

ವಿಷಯ: ದಿವಂಗತ.............................ಪ್ರಾನ್ ಸಂಖ್ಯೆ ........................ ಪದನಾಮ.......................ರವರ ಪ್ರಾನ್ ಖಾತೆಯಲ್ಲಿರುವ ಸಂಪೂರ್ಣ ಮೊತ್ತವನ್ನು ಸರ್ಕಾರಕ್ಕೆ ಜಮೆ ಮಾಡಿರುವ ಮಾಹಿತಿ ನೀಡುವ ಬಗ್ಗೆ.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿವಂಗತ............................. ಪ್ರಾನ್ ಸಂಖ್ಯೆ...............................ರವರ ನಾಮ ನಿರ್ದೇಶಿತರ ಆಯ್ಕೆ ಮೇರೆಗೆ ಪ್ರಾನ್ ಖಾತೆಯಲ್ಲಿರುವ ಸಂಪೂರ್ಣ ಮೊತ್ತ ರೂ. ............... ಸಿಆರ್‌ಎ ರವರಿಂದ ಹಿಂಪಡೆದು ಸರ್ಕಾರದ ಲೆಕ್ಕ ಶೀರ್ಷಿಕೆ....................................... ಗೆ ಜಮೆ ಮಾಡಿದ ಮೂಲ ಚಲನ್ ಪ್ರತಿ ಹಾಗೂ ಸಿಆರ್‌ಎ ರವರ ಇ-ಮೇಲ್ ಪ್ರತಿಯನ್ನು ಪತ್ರದೊಂದಿಗೆ ಅಡಕಗೊಳಿಸಿ ಕಳುಹಿಸಲಾಗಿದೆ.

ತಮ್ಮ ನಂಬುಗೆಯ,

.................... ಖಜಾನೆ

ಅರ್ಜಿದಾರನ ಭಾವಚಿತ್ರ

(ನಾಮ ನಿರ್ದೇಶಿತರು)

ಕರ್ನಾಟಕ ಸರ್ಕಾರ

<u>ಅನುಬಂಧ-V</u>

## ಸೇವೆಯಲ್ಲಿದ್ದಾಗಲೇ ಮೃತರಾದ ಸರ್ಕಾರಿ ನೌಕರ / ನೂತನ ಪಿಂಚಣಿ ಕುಟುಂಬದವರು ಕುಟುಂಬ ಪಿಂಚಣಿಗಾಗಿ ಸಲ್ಲಿಸಬೇಕಾದ ಅರ್ಜಿಯ ನಮೂನೆ (ದ್ವಿಪ್ರತಿಯಲ್ಲಿ ಸಲ್ಲಿಸುವುದು)

ಹೆಚ್.ಆರ್.ಎಂ.ಎಸ್ .ಡಿ.ಡಿ.ಓ ಕೋಡ್ ______________ ಕೆ.ಜಿ.ಐ.ಡಿ ಪಾಲಿಸಿ ಸಂಖ್ಯೆ ____________

| | | |
|---|---|---|
| 1 | ಅರ್ಜಿದಾರರ ಹೆಸರು | |
| 2 | ಮೃತ ಸರ್ಕಾರಿ ನೌಕರರ ಹೆಸರು | |
| 3 | ಮೃತ ಸರ್ಕಾರಿ ನೌಕರರ ಹುದ್ದೆ & ಮೂಲ ವೇತನ | |
| 4 | ಸರ್ಕಾರಿ ನೌಕರರ ಸೇವೆಗೆ ಸೇರಿದ ದಿನಾಂಕ | |
| 5 | ಸರ್ಕಾರಿ ನೌಕರರ ಮೃತರಾದ ದಿನಾಂಕ | |
| 6 | ಧರ್ಮ ಮತ್ತು ರಾಷ್ಟ್ರೀಯತೆ | |
| 7 | ಅರ್ಜಿದಾರನೊಂದಿಗೆ ಮೃತ ಸರ್ಕಾರಿ ನೌಕರರ ಸಂಬಂಧ | |
| 8 | ಮೃತ ವ್ಯಕ್ತಿಯು ಕೆಲಸ ನಿರ್ವಹಿಸುತ್ತಿದ್ದ ಕಛೇರಿ & ಇಲಾಖೆ | |
| 9 | ಎನ್.ಪಿ.ಎಸ್ ಡಿ.ಡಿ.ಓ ಕೋಡ್ | |
| 10 | ಎನ್.ಪಿ.ಎಸ್ ನೌಕರರ ಪ್ರಾನ್ ಸಂಖ್ಯೆ | |
| 11 | ಆಧಾರ್ ಸಂಖ್ಯೆ | |
| 12 | ಪ್ಯಾನ್ ಸಂಖ್ಯೆ (ಆದಾಯ ತೆರಿಗೆ) | |
| 13 | ಅರ್ಜಿದಾರರ ಪೂರ್ಣ ವಿಳಾಸ | |
| 14 | ಅರ್ಜಿದಾರರ ಖಾಯಂ ವಿಳಾಸ | |
| 15 | ದೂರವಾಣಿ ಸಂಖ್ಯೆ & ಮೊಬೈಲ್ ಸಂಖ್ಯೆ | |

16 . ಮೃತ ಸರ್ಕಾರಿ ನೌಕರರ ಕುಟುಂಬ ಸದಸ್ಯರ ವಿವರ :

(ತಹಶೀಲ್ದಾರ್ ರಿಂದ ಪಡೆದ ಕುಟುಂಬ ಜೀವಿಂತ ಸದಸ್ಯರ ಪಟ್ಟಿಯನ್ನು ಲಗತ್ತಿಸುವುದು.)

| ಕ್ರಮ ಸಂ. | ಹೆಸರು | ಜನ್ಮ ದಿನಾಂಕ | ಮೃತ ಸರ್ಕಾರಿ ನೌಕರರ ಸಂಬಂಧ | ವಿವಾಹಿತರೆ | ದೈಹಿಕವಾಗಿ ಅಂಗವಿಕಲರೆ |
|---|---|---|---|---|---|
| 01 | | | | | |
| 02 | | | | | |
| 03 | | | | | |
| 04 | | | | | |

[ಅರ್ಜಿಯನ್ನು ಮೃತ ಸರ್ಕಾರಿ ನೌಕರರ ಪತಿ/ಪತ್ನಿ ಸಲ್ಲಿಸಬೇಕು. ಅವರಿಬ್ಬರೂ ಜೀವಿಂತವಿಲ್ಲದಿದ್ದರೆ ಅರ್ಜಿಯನ್ನು ಮೃತ ವ್ಯಕ್ತಿಯ ಅಪ್ರಾಪ್ತ ವಯಸ್ಕ ಮಕ್ಕಳ ಪೋಷಕರು (ತಂದೆ ಅಥವಾ ತಾಯಿ ಅಪ್ರಾಪ್ತ ವಯಸ್ಕ ಮಕ್ಕಳ ಸಹಜ ಪೋಷಕರು). ಮುಸ್ಲಿಂ ಕುಟುಂಬಗಳಲ್ಲಿ ತಾಯಿ ಸಹಜ ಪೋಷಕಳಲ್ಲ. (ಸಹಜ ಪೋಷಕರು ಜೀವಿಂತವಿರದ ಸಂದರ್ಭದಲ್ಲಿ ತಹಶೀಲ್ದಾರ್ ದರ್ಜೆಗಿಂತ ಮೇಲ್ಪಟ್ಟ ಅಧಿಕಾರಿಗಳಿಂದ ಪೋಷಕರ ಪ್ರಮಾಣ ಪತ್ರವನ್ನು ಸಲ್ಲಿಸುವುದು). ದೈಹಿಕವಾಗಿ ಅಂಗವಿಕಲರಾಗಿದ್ದಲ್ಲಿ ವೈದ್ಯಕೀಯ ಪ್ರಮಾಣ ಪತ್ರವನ್ನು ಸಲ್ಲಿಸುವುದು.

| | | |
|---|---|---|
| 17 | ಕುಟುಂಬ ಪಿಂಚಣಿದಾರರ ಜನ್ಮ ದಿನಾಂಕ | |
| 18 | ಕುಟುಂಬ ಪಿಂಚಣಿದಾರರ ಎತ್ತರ (ಸೆ.ಮೀ. ಗಳಲ್ಲಿ) | |
| 19 | ಕುಟುಂಬ ಪಿಂಚಣಿದಾರರ ಗುರುತಿನ ಚಿಹ್ನೆ | |
| 20 | ಎಡಗೈ ಬೆರಳುಗಳ ಗುರುತು : | |

| **ಕಿರುಬೆರಳು** | **ಉಂಗುರದ ಬೆರಳು** | **ಮಧ್ಯದ ಬೆರಳು** | **ತೋರು ಬೆರಳು** | **ಹೆಬ್ಬೆರಳು** |
|---|---|---|---|---|
| | | | | |

| | | |
|---|---|---|
| 21 | ಎನ್.ಪಿ.ಎಸ್ ಸರ್ಕಾರಿ ನೌಕರನ ಪ್ರಾನ್ ಖಾತೆಯಲ್ಲಿರುವ ಸಂಪೂರ್ಣ ಮೊತ್ತವನ್ನು ಸರ್ಕಾರದ ಲೆಕ್ಕಕ್ಕೆ ಜಮಾ ಮಾಡಿದ ವಿವರ | ಚಲನ್ ಸಂಖ್ಯೆ: ...........<br>ದಿನಾಂಕ: ..............<br>ಮೊತ್ತ: ................. |
| 22 | ಎನ್.ಪಿ.ಎಸ್. ಸರ್ಕಾರಿ ನೌಕರನು ಸೇವೆಯಲ್ಲಿದ್ದಾಗ ತನ್ನ ಪಿಂಚಣಿ ಖಾತೆಯಿಂದ ತೆಗೆದ ಭಾಗಶಃ ಮೊತ್ತವನ್ನು ಮರಣ ಉಪದಾನದಲ್ಲಿ (DCRG) ಕಡಿತಗೊಳಿಸಲು ನಮೂದಿಸುವುದು. | ಭಾಗಶಃ ಹಿಂತೆಗೆತದ ಮೊತ್ತ............. ಹಾಗೂ<br>ದಿನಾಂಕ: ..............<br>ಉಪದಾನದಲ್ಲಿ ಕಡಿತಗೊಳಿಸಬೇಕಾದ<br>ಮೊತ್ತ........... |

| | | |
|---|---|---|
| 23 | ಕುಟುಂಬ ಪಿಂಚಣಿ ಪಡೆಯಲು ಇಚ್ಛಿಸುವ ಖಜಾನೆ | |
| 24 | ಕುಟುಂಬ ಪಿಂಚಣಿ ಪಡೆಯಲು ಇಚ್ಛಿಸುವ ಬ್ಯಾಂಕ್ ವಿವರ | |
| | a) ಬ್ಯಾಂಕ್ ನ ಹೆಸರು & ಶಾಖೆ | |
| | b) ಉಳಿತಾಯ ಖಾತೆ ಶಾಖೆ | |
| | c) ಐ.ಎಫ್.ಎಸ್.ಸಿ. ಕೋಡ್ (IFSC Code)<br>(ಉಳಿತಾಯ ಖಾತೆಯ ಪುಸ್ತಕದ ನಕಲು ಪ್ರತಿಯನ್ನು ಲಗತ್ತಿಸುವುದು) | |

ಗೆಜೆಟೆಡ್ ಅಧಿಕಾರಿಯಿಂದ ಧೃಢೀಕರಿಸಿದ ಪಾಸ್ ಪೋರ್ಟ್ ಅಳತೆಯ ಭಾವಚಿತ್ರ ಮತ್ತು ಮಾದರಿ ಸಹಿ ದ್ವಿಪ್ರತಿಯಲ್ಲಿ & ಮೂಲ ಮರಣ ಪ್ರಮಾಣ ಪತ್ರ ಸಲ್ಲಿಸುವುದು.

ಸ್ಥಳ:
ದಿನಾಂಕ:

ಅರ್ಜಿದಾರನ ಸಹಿ ಅಥವಾ
ಎಡಗೈ ಹೆಬ್ಬೆಟ್ಟಿನ ಗುರುತು

ಕಛೇರಿ ಮುಖ್ಯಸ್ಥರ ಧೃಢೀಕರಣ

ಮೇಲ್ಕಂಡ ಎಲ್ಲಾ ಮಾಹಿತಿಯು ಸರಿಯಿದೆ ಎಂದು ಧೃಢಿಕರಿಸಿದೆ

ಕಛೇರಿ ಮುಖ್ಯಸ್ಥರ ಸಹಿ

ಶ್ರೀ/ಶ್ರೀಮತಿ.....................................................................ಇವರ ಧೃಡೀಕೃತ ಭಾವಚಿತ್ರ

| |
|---|
| ಅರ್ಜಿದಾರನ<br>ಭಾವಚಿತ್ರ |

(ಕಛೇರಿ ಮುಖ್ಯಸ್ಥರು ಭಾವ ಚಿತ್ರದ ಮೇಲೆ ಧೃಢೀಕರಿಸಬೇಕು)

ಶ್ರೀ/ಶ್ರೀಮತಿ.................................................................ಇವರ ಧೃಡೀಕೃತ ಮಾದರಿ ಸಹಿ

1.

2.

3.

ಕಛೇರಿ ಮುಖ್ಯಸ್ಥರಿಂದ ಧೃಢೀಕರಣ

ಮೇಲ್ಕಂಡ ಎಲ್ಲಾ ಮಾಹಿತಿಯು ಸರಿಯಿದೆ ಎಂದು ಧೃಢಿಕರಿಸಿದೆ

ಕಛೇರಿ ಮುಖ್ಯಸ್ಥರ ಸಹಿ